ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

**ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012**

**ದೂರವಾಣಿ: 080–23460460 (5 ಲೈನ್‌ಗಳು) ಫ್ಯಾಕ್ಸ್: 080–23461576**

**ಇಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in**

**ಸಂಖ್ಯೆ : ಇಡಿ/ಕೆಇಎ/ಮೀನುಗಾರಿಕೆಇಲಾಖೆ/2014–15** **ದಿನಾಂಕ: 17.03.2016**

## ಪ್ರಕಟಣೆ

ಮೀನುಗಾರಿಕೆ ನಿರ್ದೇಶನಾಲಯ ಇವರ ಅಧಿಸೂಚನೆ ಪ್ರಕಟಣೆ ಸಂಖ್ಯೆ ಮೀನಿ/75/ಸಿಬ್ಬಂದಿ (2)/2012–13 ದಿನಾಂಕ. 18.11.2015 ರಲ್ಲಿ ನೀಡಲಾದ ಮೀನುಗಾರಿಕೆ ಕ್ಷೇತ್ರಪಾಲಕರ ಹುದ್ದೆಗಳ ನೇಮಕಾತಿಗೆ ದಿನಾಂಕ **06.05.2016** ರಂದು ಬೆಳಿಗ್ಗೆ **10.30 ರಿಂದ ಮಧ್ಯಾಹ್ನ 12.30** ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಜಿಲ್ಲಾ ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುವುದು. ಸದರಿ ಅಧಿಸೂಚನೆಯಡಿ ಅರ್ಜಿ ಸಲ್ಲಿಸಿ ಮೀನುಗಾರಿಕೆ ಇಲಾಖೆ ನಡೆಸಿದ ಈಜು ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮಾತ್ರ ಈ ಪರೀಕ್ಷೆಯನ್ನು ಬರೆಯಲು ಅವಕಾಶವಿರುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯ ಪಠ್ಯಕ್ರಮವನ್ನು ಈಗಾಗಲೇ ಮೀನುಗಾರಿಕೆ ನಿರ್ದೇಶನಾಲಯ ತಿಳಿಸಿರುವಂತೆ ಬಹು ಆಯ್ಕೆ ಮಾದರಿಯ ಒಟ್ಟು 100 ಅಂಕಗಳಿಗೆ (ಸಾಮಾನ್ಯ ಜ್ಞಾನ 50 ಅಂಕಗಳಿಗೆ ಹಾಗೂ ಸಾಮಾನ್ಯ ಕನ್ನಡ 50 ಅಂಕಗಳಿಗೆ) ಎರಡು ಗಂಟೆ ಅವಧಿಯ ಪರೀಕ್ಷೆಯನ್ನು ಹೊಂದಿರುತ್ತದೆ. ಪರೀಕ್ಷೆಗೆ ಸಂಬಂಧಿಸಿದ ಒಟ್ಟು ಅಂಕಗಳು ಹಾಗೂ ಇತರೆ ವಿವರಗಳಿಗಾಗಿ ಕೆಇಎ ವೆಬ್‌ಸೈಟ್ **http://kea.kar.nic.in** ಅನ್ನು ನೋಡುವುದು. ಈ ಪರೀಕ್ಷೆಯ ಪ್ರವೇಶ ಪತ್ರವನ್ನು (Hall ticket) ದಿನಾಂಕ 20.04.2016ರ ನಂತರ ಕೆಇಎ ವೆಬ್‌ಸೈಟ್ **http://kea.kar.nic.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

**ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು**